# ಶ್ರೀ ಜಯಚಾಮರಾಜೇಂದ್ರ ಒಡೆಯರ ದೇವೀ ಕೃತಿಗಳು

ಡಾ. ಸುಕನ್ಯಾ ಪ್ರಭಾಕರ್



**ದ**ಕ್ಷಿಣಭಾರತದ ಭೂಪಟದಲ್ಲಿ ಜಾಜ್ವಲ್ಯಮಾನವಾಗಿ ಬೆಳಗಿದ ಕಲಾಕೇಂದ್ರಗಳಲ್ಲಿ ಪ್ರಮುಖವಾಗಿ ಕಾಣುವುದು **ಮೈಸೂರು ನಗರ**. ಭಾರತೀಯ ಸಂಸ್ಕೃತಿಯ ಪ್ರತೀಕಗಳಾದ ಶಿಲ್ಪ, ಸಾಹಿತ್ಯ, ಸಂಗೀತ, ಧರ್ಮ, ತತ್ತ್ವಶಾಸ್ತ್ರ ಮುಂತಾದ ಕ್ಷೇತ್ರಗಳಿಗೆ ಮೈಸೂರಿನ ಕೊಡುಗೆ ಅತ್ಯಮೂಲ್ಯವಾದುದು. ಇದಕ್ಕೆ ಮೈಸೂರನ್ನು ಆಳಿದ ರಾಜರ ವಿಶಾಲ ಮನೋಧರ್ಮ, ಸುದೀರ್ಘ ಪರಂಪರೆ ಇವೆಲ್ಲವೂ ಕಾರಣ. ಒಟ್ಟಿನಲ್ಲಿ ವಿಜಯನಗರದ ಅರಸರ ಆಳ್ವಿಕೆಯ ನಂತರ, ರಾಜಕೀಯ ಹಾಗೂ ಸಾಂಸ್ಕೃತಿಕ ವೈಭವಗಳು ಎತ್ತರಕ್ಕೇರಲು ಮೈಸೂರಿನ ಒಡೆಯರು ಕಾರಣರಾದರು ಎನ್ನುವುದು ಸತ್ಯ.

ಮೈಸೂರನ್ನು ಆಳಿದ ಒಡೆಯರು ಸ್ವತಃ ಕಲಾವಿದರೂ, ಕಲಾರಸಿಕರೂ ಆಗಿದ್ದರು. ಇವರ ಆಳ್ವಿಕೆಯಲ್ಲಿ ಮೈಸೂರು ಸರ್ವತೋಮುಖ ಬೆಳವಣಿಗೆಯನ್ನು ಹೊಂದಿದ್ದೇ ಅಲ್ಲದೆ, 'ಮಾದರಿ ಸಂಸ್ಥಾನ' ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಸಂಗೀತ, ನೃತ್ಯ, ನಾಟಕ, ಶಿಲ್ಪ, ಚಿತ್ರ, ಸಾಹಿತ್ಯ ಮುಂತಾದ ಕಲೆಗಳಿಗೆ ರಾಜರಿಂದ ದೊರೆತ ಆಶ್ರಯ, ಪ್ರೋತ್ಸಾಹ, ಪೋಷಣೆ ಅಪಾರವಾದುದು.

ಮೈಸೂರನ್ನು ಆಳಿದ ಯದುವಂಶದ ಅರಸರು ೨೫ ಮಂದಿ. ಅವರಲ್ಲಿ ಪ್ರಮುಖವಾಗಿ ಚಿಕ್ಕದೇವರಾಜ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಕೊನೆಯದಾಗಿ ಜಯಚಾಮರಾಜ ಒಡೆಯರು ಸ್ವತಃ ಸಾಹಿತಿಗಳೂ, ಸಂಗೀತ ಪೋಷಕರೂ, ವಾಗ್ಗೇಯಕಾರರೂ ಆಗಿರುವುದನ್ನು ಕಾಣಬಹುದು. ಈ ಲೇಖನದಲ್ಲಿ ಜಯಚಾಮರಾಜೇಂದ್ರ ಒಡೆಯರ ಕೃತಿಗಳ, ಅದರಲ್ಲೂ ಅವರ ದೇವೀಪರವಾದ ವಾಗ್ಗೇಯ ರಚನೆಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವಿದೆ.

ಒಡೆಯರಿಂದ ರಚಿತವಾಗಿರುವ ವಾಗ್ಗೇಯ ಕೃತಿಗಳು ಒಟ್ಟು ೯೪. ಇದರಲ್ಲಿ ಗಣಪತಿ, ವಿಷ್ಣು, ಶಿವಪರ ಕೃತಿಗಳಲ್ಲದೆ, ದೇವಿಯ ವಿವಿಧ ರೂಪಗಳಾದ ಲಕ್ಷ್ಮಿ, ಸರಸ್ವತಿ, ಚಾಮುಂಡೇಶ್ವರಿ, ಕಾಮಾಕ್ಷಿ, ರಾಜರಾಜೇಶ್ವರಿ, ಗಾಯತ್ರಿಯರನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ. ಜಗಜ್ಜನನಿ ಒಬ್ಬಳೇ ಆದರೂ ರೂಪಗಳು ಹಲವು, ನಾಮಗಳು ಹಲವು, ಅಲ್ಲವೇ!

ಸರಸ್ವತಿಯನ್ನು ಕುರಿತು ಎರಡು ಕೃತಿಗಳನ್ನು ರಚಿಸಿದ್ದಾರೆ. ಮನುಷ್ಯನಿಗೆ ಭೌತಿಕ ಬಲಕ್ಕಿಂತಲೂ ಸರಸ್ವತಿಯಿಂದ ಅನುಗ್ರಹಿಸಲ್ಪಡುವ ಆಧ್ಯಾತ್ಮಿಕ ಬಲ ಮುಖ್ಯ ಎನ್ನುವ ಒಡೆಯರು, ಸುಜ್ಞಾನ ಮತ್ತು ಸುಮತಿಗಳಿಗಾಗಿ ಸರಸ್ವತಿಯನ್ನು ಹಂಸವಾಹನೆಯಾಗಿಯೂ ಶಾರದೆಯಾಗಿಯೂ ಆರಾಧಿಸಿದ್ದಾರೆ. ಸರಸ್ವತಿಯನ್ನು ಕುರಿತ ಈ ಎರಡು ರಚನೆಗಳಿಗೂ 'ಹಂಸವಿನೋದಿನಿ', 'ಹಂಸನಟನಿ' ಎಂಬ ಅಪರೂಪದ ರಾಗಗಳನ್ನು ಆರಿಸಿಕೊಂಡಿದ್ದಾರೆ. ಸರಸ್ವತಿಪರ ರಚನೆಗಳಿಗೆ ಈ ರಾಗಗಳ ಆಯ್ಕೆ ಔಚಿತ್ಯಪೂರ್ಣವೂ ಆಗಿದೆ.

**ಸರಸ್ವತಿ ಭಗವತಿಂ ನಮಾಮ್ಯಹಂ** – ಎಂಬ ಹಂಸವಿನೋದಿನಿ ರಾಗದ ರಚನೆಯಲ್ಲಿ ಸರಸ್ವತಿಯ ೨೦ ನಾಮಗಳನ್ನು ಬಳಸಿದ್ದಾರೆ. ಜ್ಞಾನದ ಸಾಧನಗಳು ೨೦. ಅದರ ಅರಿವಿದ್ದೇ ಈ ಕೃತಿಯಲ್ಲಿ ಸರಸ್ವತಿಯನ್ನು ಆರಾಧಿಸಿದ್ದಾರೆ ಅನ್ನಿಸುತ್ತದೆ. ಆ ಆಧ್ಯಾತ್ಮಿಕ ಸಂಪತ್ತಿಗಾಗಿ ಒಡೆಯರು ಸರಸ್ವತಿಗೆ ನಮನಗಳನ್ನು ಸಲ್ಲಿಸಿದ್ದಾರೆ.

**ವಂದೇಹಂ ಸದಾ ಶಾರದಾಂ** ಎಂಬ ಹಂಸನಟನಿ ರಾಗದ ಕೃತಿಯಲ್ಲಿ, ಅಜ್ಞಾನವನ್ನು ಹೊಡೆದೋಡಿಸಿ, ಸುಜ್ಞಾನವನ್ನು ನೀಡುವ ಶಾರದೆಗೆ ತಲೆಬಾಗಿದ್ದಾರೆ. 'ಬ್ರಹ್ಮಮಾನಸೋಲ್ಲಾಸಿನೀಂ ಮಾನಿನೀಂ' ಎಂದು ಅದರಲ್ಲಿ ಹಾಡಿದ್ದಾರೆ. 'ಮೂರ್ತಾಮೂರ್ತ

ಲೇಖಕಿ ಪ್ರಖ್ಯಾತ ಸಂಗೀತಜ್ಞೆ ಮತ್ತು ಗಾಯಕಿಯಾಗಿದ್ದಾರೆ. ಇವರು ಜಯಚಾಮರಾಜೇಂದ್ರ ಒಡೆಯರ ಕೃತಿಗಳ ಮೇಲೆ ಸಂಶೋಧನೆ ನಡೆಸಿ ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದಿದ್ದಾರೆ

ಭವ್ಯ ಸ್ವರೂಪಾಂ', 'ಕರ್ತೃತ್ವಾದ್ಯತೀತರೂಪಾಂ' ಮುಂತಾದ ಪ್ರಯೋಗಗಳು ವಿಶೇಷ ವ್ಯಾಖ್ಯಾನವನ್ನು ಬಯಸುವಂಥವು. ಹೀಗೆ ಈ ಕೃತಿಯನ್ನು ಸಂಗೀತಸಾಹಿತ್ಯಗಳೆರಡರ ದೃಷ್ಟಿಯಿಂದಲೂ ಉನ್ನತ ಮಟ್ಟಕ್ಕೆ ಏರಿಸಿದ್ದಾರೆ ಒಡೆಯರು.

ಮುಂದಿನ ರೂಪವಾಗಿ ಲಕ್ಷ್ಮಿಯನ್ನು ಐದು ಕೃತಿಗಳಲ್ಲಿ ವರ್ಣಿಸಿದ್ದಾರೆ. ಇವುಗಳಲ್ಲಿ ಒಂದೊಂದೂ ವಿಶಿಷ್ಟವಾಗಿ ಹೊರ ಹೊಮ್ಮಿದೆ. **೧. ಕಾಮಾಕ್ಷೀಂ ವರಲಕ್ಷ್ಮೀಂ ೨. ಪರಿಪಾಹಿ ಮಾಂ ಶ್ರೀವರಲಕ್ಷ್ಮೀ ೩. ಪಾಹಿ ಮಾಂ ಶ್ರೀವರಲಕ್ಷ್ಮೀ ೪. ಕ್ಷೀರಸಾಗರ ಶಯನ ವಕ್ಷಸ್ಥಲ ನಿವಾಸಿನೀಂ ೫. ಕಮಲಾಂಬಿಕೆ** – ಈ ಎಲ್ಲ ಕೃತಿಗಳಲ್ಲೂ, **'ವರಲಕ್ಷ್ಮಿ'** ಎಂದು ಪ್ರಯೋಗವಾಗಿದ್ದರೂ, ದೇವಿಯ ಪರಿಪೂರ್ಣ ಸ್ವರೂಪದಡಿಯಲ್ಲಿಯೇ, ಕಾಮಾಕ್ಷಿಯನ್ನೂ ವರಲಕ್ಷ್ಮಿಯಾಗಿ ಕಂಡಿದ್ದಾರೆ. ಕೋರಿದವರ ಅಭೀಷ್ಟಗಳನ್ನು ನೆರವೇರಿಸುವ ಕಲ್ಪತರುವೇ ಅವಳಾಗಿದ್ದಾಳೆ. **ಕಲಾವತೀಂ ಕರಾಳೀಂ ಕಾಳಿಕಾ ರೂಪಿಣೀಂ ಕಾತ್ಯಾಯನೀಂ, ಕಾಳರೂಪಿಣೀಂ** ಎಂಬ ಪ್ರಯೋಗ ವಿಶೇಷವಾಗಿ ಮೂಡಿಬಂದಿದೆ. ಶ್ರೀವಿದ್ಯಾ ಉಪಾಸಕರಾದ ಒಡೆಯರು, **"**ಕುಂಡಲಿನೀಶಕ್ತಿಯ ಸಂಕೇತವಾದ ವರಲಕ್ಷ್ಮಿಯೇ, ನನ್ನನ್ನು ಕಾಪಾಡು" ಎಂದು ಬೇಡುವುದಲ್ಲದೆ, **ನಿರ್ವಿಕಲ್ಪ, ಸವಿಕಲ್ಪ, ಸಮಾಧಿಸ್ಥೆ** ಎಂದು ಹಾಡಿರುವುದಲ್ಲಿ ಅಷ್ಟಾಂಗಯೋಗದ ವಿವರವಾದ ಅಧ್ಯಯನದ ಹಿನ್ನೆಲೆ ಸ್ಪಷ್ಟವಾಗಿದೆ.

**ಕ್ಷೀರಸಾಗರ ಶಯನ ವಕ್ಷಸ್ಥಲ ನಿವಾಸಿನೀಂ ಪ್ರಣಮಾಮಿ** ಎಂದು ಸುದೀರ್ಘವಾದ ಚತುರಶ್ರ ಧ್ರುವತಾಳ ವಿಳಂಬಕಾಲದಲ್ಲಿ ಮಾಯಾಮಾಳವಗೌಳದಂತಹ ಸುಭಗ ರಾಗದಲ್ಲಿ ಹಾಡಿರುವುದು ರೋಮಾಂಚಕಾರಿಯೇ ಹೌದು. **ಷಟ್ತ್ರಿಂಶತ್ತತ್ತ್ವ ಸ್ವರೂಪಿಣೆ** ಎನ್ನುವಲ್ಲಿ ಜ್ಯೋತಿಷ್ಯದ ೩೬ ಮುಖ್ಯ ಗುಣಗಳು, ಕ್ಷಿತಿಯಿಂದ ಆಕಾಶದವರೆಗಿರುವ ೩೬ ತತ್ತ್ವಗಳ ಬಗೆಗೂ ಒಡೆಯರ ಆಲೋಚನಾಲಹರಿ ಹಮ್ಮಿದೆ. **ಸ್ವಪ್ರಕಾಶ ತೇಜಃಪ್ರಕಾಶಿನಿ, ಚಿತ್ಪ್ರಕಾಶದಾಯಿನಿ** – ಮುಂತಾದ ಪ್ರಯೋಗಗಳಲ್ಲಿ ಪುಟಗಟ್ಟಲೆ ವ್ಯಾಖ್ಯಾನವನ್ನು ನೀಡುವಷ್ಟು ಸತ್ವ ಅಡಗಿದೆ. ಇದು ಅಂತಹ ಮಹಾನ್ ಕೃತಿ.

**ಮಾಧವ ಮನೋಹರಿ ಕಮಲಾಂಬಿಕೆಯನ್ನು ಮಾಮವ ಸದಾ** ಎಂದು ನಾಟರಾಗದಲ್ಲಿ ಬೇಡಿದ್ದಾರೆ. ಕಮಲಾಸನ ಪ್ರಿಯೆ ವಿಮಲೆಯೂ ಆಗಿದ್ದಾಳೆ. ನಾಲ್ಕು ಸ್ವರ ಸಾಹಿತ್ಯ ಸಹಿತ ಚರಣಗಳುಳ್ಳ ಈ ಕೃತಿ, ತ್ಯಾಗರಾಜರ 'ಜಗದಾನಂದಕಾರಕ' ಕೃತಿಯನ್ನು ನೆನಪಿಸುವಂತಿದೆ.

ಮುಂದೆ ಪಾರ್ವತಿ ಅಥವಾ ಪರಾಶಕ್ತಿಯ ರೂಪಗಳಲ್ಲಿ ಚಾಮುಂಡೇಶ್ವರಿ, ಕಾಮಾಕ್ಷಿ, ಮಾತಂಗಕನ್ಯೆ, ಬೃಹನ್ನಾಯಕಿ, ಗೌರಿ, ತ್ರಿಪುರಸುಂದರಿ – ಹೀಗೆ ವಿಧವಿಧವಾಗಿ ಚಿತ್ರಿಸುತ್ತಾ ಐವತ್ತೊಂದು ಕೃತಿಗಳನ್ನು ಚಾಮರಾಜೇಂದ್ರ ಒಡೆಯರು ನಾಡಿಗೆ ನೀಡಿದ್ದಾರೆ ಎಂದರೆ ನಿಜಕ್ಕೂ ಅವುಗಳನ್ನು ಅಧ್ಯಯನ ಮಾಡಿ ಹಾಡುವ ನಾವೇ ಧನ್ಯರು ಎಂದೆನಿಸುತ್ತದೆ.

'ಶ್ರೀವಿದ್ಯಾ' ಅಂಕಿತವನ್ನೇ ಹೊಂದಿರುವ ಒಡೆಯರ ಕೃತಿಗಳಲ್ಲಿ ಶ್ರೀವಿದ್ಯೆಯನ್ನು ಕುರಿತು ಶಾಸ್ತ್ರೀಯ ಅಥವಾ ಉಪಾಸನಾತ್ಮಕ ಅಂಶಗಳು ಪ್ರಸ್ತಾಪವಾಗಿವೆ. ಅನುಷ್ಠಾನಸಂಬಂಧಿಯಾದ ಅಥವಾ ತಾಂತ್ರಿಕ ಉಪಾಸನೆಗೆ ಅನುಕೂಲವಾದ ಉಲ್ಲೇಖಗಳು ಸಾಕಷ್ಟು ದೊರೆಯುತ್ತವೆ. ಒಡೆಯರ ಐವತ್ತೊಂದು ಕೃತಿಗಳನ್ನೂ ಸೂಕ್ಷ್ಮವಾಗಿ ನಿರೂಪಿಸಿದರೆ ಮತ್ತೊಂದು ಗ್ರಂಥವೇ ನಿರ್ಮಾಣವಾಗಬಹುದೇನೋ. ಹಾಗಾಗಿ ಶ್ರೀವಿದ್ಯಾ ಉಪಾಸನೆಗೆ ಸಂಬಂಧಿಸಿದ ಕೆಲವು ಅಂಶಗಳನ್ನು ಉದಾಹರಿಸಿ, ಶಕ್ತಿ ಉಪಾಸನೆಗೆ ಒಡೆಯರ ಕೃತಿಗಳು ಎಷ್ಟು ಸಹಕಾರಿ ಎನ್ನುವುದನ್ನು ಮಾತ್ರ ಸ್ವಲ್ಪ ಪರಿಚಯ ಮಾಡಿಕೊಡುತ್ತೇನೆ.

**ಸರ್ವಾನಂದಾಲಯ ತ್ರಿಕೋಣಾಂತರ್ಗತ** (ಕಾಮೇಶ್ವರೀಂ ಕೃತಿ–ಕಾಮವರ್ಧಿನೀ ರಾಗ), **ಗುಪ್ತಯೋಗ ಮಾಯೆ** (ಗೌರಿಮನೋಹರಿ ಕೃತಿ – ಗೌರಿಮನೋಹರಿ ರಾಗ), **ಸೂಕ್ಷ್ಮನಾಳಾಂತರ್ಗತ ತ್ರಿವೇಣಿ, ಅಣಿಮಾದ್ಯಷ್ಟಸಿದ್ಧಿಶಕ್ತ್ಯಾತ್ಮಕ, ಅನಾಹತಾದಿ ಷಟ್ಕಮಾಲಾಂಕಸ್ಥಿತೇ, ನವಾವರಣ ಶ್ರೀಮದಾದಿ ವಿದ್ಯೆ** – (ಭುವನೇಶ್ವರಿ ಕೃತಿ – ಭುವನಗಾಂಧಾರಿ ರಾಗ), **ಈಶಾನಾದಿ ಪಂಚಬ್ರಹ್ಮಮಯಿ** (ಶ್ರೀವಿದ್ಯೆ ಕೃತಿ – ನಾದಬ್ರಹ್ಮ ರಾಗ), **ಅಕಾರಾದಿಕ್ಷಕಾರಾಧೀಶ್ವರಿ, ಏಕಾಕ್ಷರಿ** (ಅಂಬಾ ಶ್ರೀರಾಜರಾಜೇಶ್ವರಿ ಕೃತಿ – ಭೋಗವಸಂತ ರಾಗ), **ಹಕಾರ, ಮಕಾರ, ಸಕಾರ ರೂಪಾ** (ಕಾಮಾಕ್ಷಿ ಕೃತಿ – ಜನರಂಜನಿ ರಾಗ), **ಕಾದಿ ಹಾದಿ ಸರ್ವಾಂತಸ್ಥಿತಾಂ** (ನಾದರೂಪಿಣಿ ಕೃತಿ, ಕೋಕಿಲ ಪಂಚಮ ರಾಗ) – ಹೀಗೆ ಕೆಲವೇ ಕೃತಿಗಳಲ್ಲಿ ಈ ರೀತಿಯ ಉಲ್ಲೇಖಗಳು ಸಾಕಷ್ಟಿವೆ. ಶ್ರೀಚಕ್ರವನ್ನೇ ನೇರವಾಗಿ ಪ್ರಸ್ತಾಪ ಮಾಡುವುದು ಮೇಲಿನ ಕೃತಿಗಳ ವೈಶಿಷ್ಟ್ಯ.

ಶಕ್ತಿದೇವತೆಯ ಉಪಾಸನೆ ಭಾರತ ದೇಶದಲ್ಲಿ ಬಹು ಪ್ರಾಚೀನವಾದುದು. ಅದು ಋಗ್ವೇದದಷ್ಟೇ ಪುರಾತನ. ದೇವಿಯ ಉಪಾಸನಾ ಪದ್ಧತಿಯಲ್ಲಿ ಪೂಜೆ, ಹೋಮ, ಮಂತ್ರ, ಜಪ – ಇವುಗಳಿಗಿರುವಷ್ಟೇ ಪ್ರಾಶಸ್ತ್ಯ ಪಾರಾಯಣ, ಗೀತ, ವಾದನಗಳಿಗೂ ಇದೆ. ಹಾಗಾಗಿ, ಆ ದೇವಿಯ ವಿವಿಧ ರೂಪಗಳನ್ನು ಗೇಯಕೃತಿಗಳ ಮೂಲಕ ನಮ್ಮ ಕಣ್ಣಮುಂದೆ ತಂದಿರಿಸಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರಿಗೆ ನಮ್ಮ ನಮನಗಳು; ಆ ಮೂಲಕ ಹಾಡಿ, ಅನುಭವಿಸಿ, ಅರ್ಥೈಸಿಕೊಳ್ಳುವ ಅವಕಾಶ ನೀಡಿದುದಕ್ಕೆ ಕೃತಜ್ಞತೆಗಳು.

**ಪ್ರಿಯ ಓದುಗರೇ, ದಯವಿಟ್ಟು ಗಮನಿಸಿ**

**ವಿವೇಕಪ್ರಭ ಪತ್ರಿಕೆಯ ಚಂದಾವಿವರ, ಪತ್ರಿಕೆಯು ಸಕಾಲದಲ್ಲಿ ಬರದಿದ್ದರೆ ವಿಚಾರಣೆ – ಮುಂತಾದವುಗಳ ಬಗ್ಗೆ ನೀವು ಈ ಕೆಳಗಿನ ಮೊಬೈಲ್ ದೂರವಾಣಿ ಸಂಖ್ಯೆಗೆ ನೇರವಾಗಿ ಕರೆಮಾಡಬಹುದು:**

**9481533505**

**(ಶ್ರೀ ಕೆ. ಪಿ. ವೇಣುಗೋಪಾಲ್)**

**(ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ಮಾತ್ರ, ಭಾನುವಾರ ಮತ್ತು ರಜಾದಿನಗಳನ್ನು ಹೊರತುಪಡಿಸಿ.)**